ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.772/2019

| | | | |
|---|---|---|---|
| ಹೆಸರು | : | ಹರೀಶ್ ಕುಮಾರ್ ಡಿ | ಸಿ .ಡಬ್ಲ್ಯೂ :13 |
| ತಂದೆ ಹೆಸರು | : | ದಾಳಿ ನರಸಯ್ಯ | ಪಿ .ಡಬ್ಲ್ಯೂ :7 |
| ವಯಸ್ಸು | : | 39 ವರ್ಷ | |
| ಉದ್ಯೋಗ | : | PSI ನಂದೀಗಿರಿಧಾಮ ಪೊಲೀಸ್ ಠಾಣೆ ಚಿಕ್ಕಬಳ್ಳಾಪುರ | |
| ವಾಸಸ್ಥಳ | : | ಚಿಕ್ಕಬಳ್ಳಾಪುರ | |

ಸಾಕ್ಷಿಯನ್ನು ದಿಃ 17-03-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 25-01-2019 ರಿಂದ 22-02-2020 ರವರೆಗೆ ಗುಬ್ಬಿ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ .

ದಿಃ 19-02-2019 ರಂದು ನಾನು ಠಾಣಾ ಪ್ರಭಾರದಲ್ಲಿದಾಗ ಬೆಳಗ್ಗೆ 10.00 ಗಂಟೆಯಲ್ಲಿ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದು ಠಾಣಾ ಮೊ. ಸಂಖ್ಯೆ 26/2019 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ .

ಅದೇ ದಿನ ತನಿಖೆಯನ್ನು ಮುಂದುವರೆಸಿ ಚಾಸಾ -2 ಮತ್ತು 3 ರವರ ಸಮಕ್ಷಮ ಚಾಸಾ -1 ರವರ ತೋರಿಸಿದ ಕೃತ್ಯ ಸ್ಥಳದಲ್ಲಿ ಸಂಜೆ 5.30 ರಿಂದ 6.15 ರವರೆಗೆ ಪಂಚನಾಮೆ ಕ್ರಮ ಜರುಗಿಸಿದ್ದೇನೆ .

ಮಾಲು ಪತ್ತೆಗಾಗಿ ಚಾಸಾ -11 ಮತ್ತು 12 ರವರನ್ನು ನೇಮಿಸಿದ್ದೇನೆ .

ದಿಃ 20-02-2019 ರಂದು ಚಾಸಾ -11 ಮತ್ತು 12 ರವರು ಇಬ್ಬರು ಆಸಾಮಿಗಳನ್ನು ತುಮಕೂರಿನಲ್ಲಿ ವಶಕ್ಕೆ ಪಡೆದು ಸಂಜೆ 6.30 ರವರ ಸಮಯಕ್ಕೆ ಹಾಜರುಪಡಿಸಿ ಚಾಸಾ -11 ರವರು ವರದಿ ನೀಡಿದ್ದಾರೆ .

ಸದರಿ ಆಸಾಮಿಗಳನ್ನು ವಿಚಾರಣೆಗೆ ಒಳಪಡಿಸಿ ಅವರ ಸ್ವ ಇಚ್ಛಾ ಹೇಳಿಕೆ ಪಡೆದು ಸಂಜೆ 7.30 ಕ್ಕೆ ದಸ್ತಗಿರಿ ಮಾಡಿದ್ದೇನೆ . ಆರೋಪಿತರುಗಳು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಕೃತ್ಯ ಸ್ಥಳ ಹಾಗೂ ಕಳವು ಮಾಡಿದ ಮಾಲು ಇಟ್ಟಿರುವ ಸ್ಥಳವನ್ನು ತೋರಿಸುವುದಾಗಿ ತಿಳಿಸಿದ್ದಾರೆ . ಅಂದು ಅವೇಳೆಯಾದ್ದರಿಂದ ಆರೋಪಿತರುಗಳನ್ನು ಪೊಲೀಸರಿಗೆ ಅಭಿರಕ್ಷೆಯಲ್ಲಿ ಇಟ್ಟಿದ್ದೆ .

ದಿಃ 21-02-2019 ರಂದು ಆರೋಪಿತರುಗಳು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ತಿಳಿಸಿದಂತೆ

ಕೃತ್ಯ ಸ್ಥಳವನ್ನು ತೋರಿಸಿದ್ದು ಚಾಸಾ -2 ಮತ್ತು 3 ರವರ ಸಮಕ್ಷಮ ಆರೋಪಿತರುಗಳು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ 8.30 ರಿಂದ 9.15 ರವರೆಗೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿದ್ದೇನೆ .

ನಂತರ ಆರೋಪಿತರುಗಳು ಕಳವು ಮಾಡಿದ್ದ ಮಾಲುಗಳನ್ನು ಇಟ್ಟಿದ್ದ ಸ್ಥಳವನ್ನು ತೋರಿಸುವುದಾಗಿ ತಿಳಿಸಿ ತುಮಕೂರು ಟೌನ್ ಶಿರಾ ಗೇಟ್ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ ಚಾಸಾ -4 ಮತ್ತು 5 ರವರ ಸಮಕ್ಷಮ ಆರೋಪಿತರುಗಳು ತೋರಿಸಿದ ಸ್ಥಳದಲ್ಲಿ ಅವರು ಹಾಜರುಪಡಿಸಿದ ಕಳವು ಮಾಡಿದ್ದ 500 ಮೀಟರ್ ಉದ್ದದ ಮೂರು ಎಳೆಯ ABC Electric Wire bundle ವಶಕ್ಕೆ ಪಡೆದು ಬ 10.00 ರಿಂದ 11.00 ರವರೆಗೆ ಜಪ್ತು ಪಂಚನಾಮೆ ಕ್ರಮ ಜರುಗಿಸಿದ್ದೇನೆ .

ನಂತರ ಆರೋಪಿತರುಗಳು ಹಾಗೂ ಮಾಲುಗಳೊಡನೆ ಠಾಣೆಗೆ ಹಾಜರಾಗಿ ವಶಪಡಿಸಿಕೊಂಡ ಮಾಲಿನ ವಿವರಗಳನ್ನು ಠಾಣಾ ಪಿ ಎಫ್ ನಂ 31/2019 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ .

ರಿಮ್ಯಾಂಡ್ ಅರ್ಜಿ ತಯಾರಿಸಿ ಚಾಸಾ - 11 ಮತ್ತು 12 ರವರ ಬೆಂಗಾವಲಿ ನಲ್ಲಿ ಆರೋಪಿತರುಗಳನ್ನು ಮಾನ್ಯ ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿ ಕಳುಹಿಸಿಕೊಟ್ಟಿದ್ದೇನೆ .

ಅದೇ ದಿನ ಚಾಸಾ -1 ರಿಂದ 6 ರವರ ಹೇಳಿಕೆ ಪಡೆದಿದ್ದೇನೆ .

ದಿಃ 30-07-2019 ರಂದು ಈ ಪ್ರಕರಣದಲ್ಲಿ ಕಳ್ಳತನ ಮಾಡಲಾಗಿದ್ದ ವೈರ್ ಬಂಡಲ್ ನ್ನು ತುಂಬಿಕೊಂಡು ಹೋಗಿದ್ದ KA-06-AA-2206 ಸಂಖ್ಯೆಯ ಕ್ಯಾಂಟರ್ ವಾಹನವನ್ನು ಅದರ ಮಾಲೀಕರಾದ ಚಾಸಾ -7 ರವರು ನನ್ನ ಸಮಕ್ಷಮ ಹಾಜರುಪಡಿಸಿದ್ದು ಸದರಿ ವಾಹನವನ್ನು ಚಾಸಾ -8 ಮತ್ತು 9 ರವರ ಸಮಕ್ಷಮ ಪಂಚನಾಮೆ ಮೂಲಕ ಬೆಳಗ್ಗೆ 9.00 ರಿಂದ 9.30 ರವರೆಗೆ ವಶಕ್ಕೆ ಪಡೆದಿದ್ದೇನೆ . ಸದರಿ ವಾಹನದ ವಿವರಗಳನ್ನು ಠಾಣಾ ಪಿ ಎಫ್ ನಂ 147/2019 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ .

ಅದೇ ದಿನ ಕ್ಯಾಂಟರ್ ಮಾಲಿಕರಾದ ಚಾಸಾ -7 ಹಾಗೂ ಚಾಲಕ ನವೀದ್ ಬೇಗ್ ರವರ ಹೇಳಿಕೆ ಪಡೆದಿದ್ದೇನೆ .

ದಿಃ 07-08-2019 ರಂದು ತನಿಖೆಯನ್ನು ಮುಂದುವರೆಸಿ ಸದರಿ ಕ್ಯಾಂಟರ್ ನ್ನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಆರ್ ಸಿ ಮಾಲೀಕರ ವಶಕ್ಕೆ ನೀಡಿದ್ದೇನೆ .

ದಿಃ 14-08-2019 ರಂದು ಈ ಪ್ರಕರಣದ 1 ಮತ್ತು 2 ನೇ ಆರೋಪಿತರುಗಳು ತಮ್ಮ ಸ್ವ

ಇಚ್ಛಾ ಹೇಳಿಕೆಯಲ್ಲಿ ಸಿದ್ದರಾಜು ಎಂಬ ವ್ಯಕ್ತಿಯೂ ಕೂಡ ನಮ್ಮ ಜೊತೆ ಕಳ್ಳತನ ಮಾಡುವಲ್ಲಿ ಭಾಗಿಯಾಗಿದ್ದ ಎಂಬುದರ ಬಗ್ಗೆ ತಿಳಿಸಿದ್ದ ಮೇರೆಗೆ ಸದರಿ ಸಿದ್ದರಾಜು ರವರನ್ನು ಹಾಜರುಪಡಿಸುವಂತೆ ತಿಳಿಸಿ 1 ಮತ್ತು 2 ನೇ ಆರೋಪಿತರುಗಳಿಗೆ ಪೊಲೀಸ್ ನೋಟಿಸ್ ಜಾರಿಗೊಳಿಸಿದ್ದೇನೆ .

ದಿಃ 16-08-2019 ರಂದು ಆರೋಪಿತರುಗಳ ಮುಂದುವರೆದ ಹೇಳಿಕೆ ಪಡೆದಿದ್ದೇನೆ .

ದಿಃ 18-09-2019 ರಂದು ಪ್ರಕರಣದ ತನಿಖೆ ಪೂರ್ಣಗೊಂಡಿದ್ದು ಆರೋಪಿತರುಗಳ ವಿರುದ್ಧ ಗುರುತರ ಆರೋಪಗಳು ಸಾಬೀತಾಗಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ .

ನಿಪಿ -1 ರಿಂದ 4 ರಲ್ಲಿ ಸಾಕ್ಷಿಯು ತಮ್ಮ ಸಹಿಗಳನ್ನು ಗುರುತಿಸಿದ್ದಾರೆ ಅವುಗಳನ್ನು ನಿಪಿ -1 (ಬಿ) ನಿಪಿ -2 (ಬಿ) , 3 (ಬಿ) ಮತ್ತು 4 (ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದೂರು ಮತ್ತು ಆರೋಪಿತರುಗಳ ಸ್ವ ಇಚ್ಛಾ ಹೇಳಿಕೆಯನ್ನು ತೋರಿಸಲಾಗಿ ಅವುಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ ಅವುಗಳನ್ನು ನಿಪಿ -8 ರಿಂದ 10 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ -8 (ಎ) ರಿಂದ 10 (ಎ) ಎಂದು ಗುರುತಿಸಲಾಯಿತು .

ಮೇಲೆ ಹೇಳಿದಂತೆ ಪಂಚನಾಮೆಯ ಮೂಲಕ ವಶಕ್ಕೆ ಪಡೆದ ವೈರ್ ಮತ್ತು ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ .

ಸಾಕ್ಷಿಗೆ ವೈರ್ ನ 2 ಛಾಯಾ ಚಿತ್ರಗಳನ್ನು ಮತ್ತು ಕ್ಯಾಂಟರ್ 3 ಛಾಯಾ ಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದಾರೆ . ಸದರಿ ಛಾಯಾ ಚಿತ್ರಗಳ ಸಂಬಂಧ ಭಾರತ ಸಾಕ್ಷ್ಯ ಅಧಿನಿಯಮ ಕಲಂ 65 (ಬಿ) ರಡಿಯಲ್ಲಿ ಪ್ರಮಾಣ ಪತ್ರವನ್ನು ಸೂಕ್ತ ರೀತಿಯಲ್ಲಿ ಸಲ್ಲಿಸಿಲ್ಲದ ಕಾರಣ ಛಾಯಾಚಿತ್ರಗಳನ್ನು ನಿಶಾನೆಗಳಾಗಿ ಗುರುತಿಸಿಲ್ಲ.

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 1 ಆರೋಪಿತರನ್ನು ನೋಡಿ ಗುರುತಿಸಿದ್ದಾರೆ . 2 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತು ಪತ್ತೆಯ ಬಗ್ಗೆ ತಕರಾರು ಇಲ್ಲ ವೆಂದು ಅವರ ಪರ ವಕೀಲರು ತಿಳಿಸಿದ್ದಾರೆ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-</u>

ದೂರು ನೀಡುವಲ್ಲಿ 7 ದಿನ ಕಾಲವಿಳಂಬವಾಗಿದೆ ಎಂದರೆ ಸರಿ . ತಡವಾಗಿ ದೂರು ನೀಡಲು ಕಾರಣವೇನೆಂದು ಪ್ರಶ್ನಿಸಿ ಪಿರ್ಯಾದಿಯಿಂದ ವಿವರ ಪಡೆದಿದ್ದೇನೆ. ದೂರಿನಲ್ಲಿಯೇ ವಿವರ ಬರೆಯಲಾಗಿದೆ ಎಂದು ಸಾಕ್ಷಿ ಮುಂದುವರೆದು ಹೇಳಿದ್ದಾರೆ . ನಾನು ಹೇಳುವಂತೆ ಯಾವುದೇ ಸ್ಥಳಕ್ಕೆ ಭೇಟಿ ನೀಡದೆ ಠಾಣೆಯಲ್ಲಿಯೇ ಕುಳಿತು

ಪಂಚನಾಮೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ -11 ಮತ್ತು 12 ರವರನ್ನು ಮಾಲು ಪತ್ತೆಯ ಬಗ್ಗೆ ನೇಮಸಿದ್ದ ಸಮಯ ಠಾಣಾ ದಾಖಲೆಯಲ್ಲಿ ವಿವರ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ . ಚಾಸಾ -12 ರವರಿಂದ ಆರೋಪಿತರುಗಳನ್ನು ಪತ್ತೆ ಮಾಡಿದ್ದ ಸಂಬಂಧ ವರದಿ ಪಡೆದಿದ್ದೀರಾ ಎಂದರೆ ಸಾಕ್ಷಿಯು ಚಾಸಾ -11 ರವರು ವರದಿ ಸಲ್ಲಿಸಿದ್ದಾರೆ ಅದರಲ್ಲಿಯೇ ಚಾಸಾ -12 ರವರ ವಿವರ ಬರೆದಿದ್ದಾರೆ ಎಂದು ತಿಳಿಸಿದ್ದಾರೆ . ಚಾಸಾ -11 ಮತ್ತು 12 ರವರನ್ನು ಆರೋಪಿತರುಗಳ ಪತ್ತೆಗೆಂದು ನೇಮಿಸಿಲ್ಲ , ಅವರು ಆರೋಪಿತರುಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರುಗಳು ಸ್ವ ಇಚ್ಛಾ ಹೇಳಿಕೆಯನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳ ಪಂಚನಾಮೆಯನ್ನು ಠಾಣೆಯಲ್ಲಿ ಕುಳಿತು ಸದರಿ ಪಂಚನಾಮೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಶಿರಾ ಗೇಟ್ ನ ಬಳಿ ಪಂಚನಾಮೆ ಮಾಡಿರುವುದಾಗಿ ಪಂಚನಾಮೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ -1 ರಿಂದ 7 ರವರ ಹೇಳಿಕೆಯನ್ನು ಮತ್ತು ವಾಹನ ಅಮಾನತ್ತು ಪಂಚನಾಮೆಯನ್ನು ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರುಗಳು ಸಿದ್ದರಾಜು ಎಂಬ ವ್ಯಕ್ತಿಯ ಬಗ್ಗೆ ವಿವರಗಳ ನೀಡಿ ಯಾವುದೇ ಸ್ವ ಇಚ್ಛಾ ಹೇಳಿಕೆ ನೀಡಿಲ್ಲ , ಪ್ರಕರಣಕ್ಕಾಗಿ ಅದನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯಕ್ಕೆ ಸಲ್ಲಿಸಿರುವ ರಿಮ್ಯಾಂಡ್ ಅರ್ಜಿಯಲ್ಲಿ 1 ನೇ ಅರೋಪಿತರಾಗಿ ಸಿದ್ದರಾಜು ರವರನ್ನು ತೋರಿಸಿದ್ದು ಅವರು ಬಜಾಜ್ ಶೋ ರೂಮ್ ನಲ್ಲಿ ಕೆಲಸ ಮಾಡುತ್ತಾರೆ ಎಂಬುದಾಗಿ ತಿಳಿಸಿದ್ದೇನೆ ಎಂದರೆ ಸರಿ. ಸದರಿ ಸಿದ್ದರಾಜು ರವರನ್ನು ಪತ್ತೆ ಮಾಡುವಲ್ಲಿ ವಿಫಲವಾದ ಕಾರಣ ಯಾವುದೇ ತಪ್ಪು ಮಾಡದೇ ಇರುವ ಲಿಂಗರಾಜು ಮತ್ತು ಸುರೇಶ್ ರವರು ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಅಕ್ಕೆ ಸಂಬಂಧಿಸಿ ಸುಮಾರು 6 ತಿಂಗಳವರೆಗಗೂ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ , ಮೇಲಾಧಿಕಾರಿಗಳು ಅದನ್ನು ಪ್ರಶ್ನಿಸಿದ ಕಾರಣ ತ್ವರಿತವಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಸಲುವಾಗಿ ಈ ಆರೋಪಿತರುಗಳ ವಿರುದ್ದ ಸುಳ್ಳು ವಿವರಗಳ ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರುಗಳ ವಿರುದ್ದ ಯಾವುದೇ ಆರೋಪಗಳು ಸಾಬೀತಾಗಿರುವುದಿಲ್ಲ , ಆದರೂ ಸಹಾ ಅವರ ವಿರುದ್ದ ಸುಳ್ಳು ವಿವರಗಳ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.